# ಕರ್ನಾಟಕ ಅಸ್ತಿತ್ವದಲ್ಲಿರುವ ಕಾನೂನುಗಳ (ಮೌಲ್ಯಗಳಿಗೆ ಮಾಡಿದ ಉಲ್ಲೇಖಗಳ ಅರ್ಥಾನ್ವಯ) ಅಧಿನಿಯಮ, 1957

**(ಕರ್ನಾಟಕ ರಾಜ್ಯಪತ್ರ, ಗುರುವಾರ, ಆಗಸ್ಟ್ 24, 2006, ಭಾಗ – IVಎ, 1472 ಮತ್ತು 1473ನೇ ಪುಟಗಳಲ್ಲಿ ಪ್ರಕಟಿತವಾಗಿದೆ).**

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**

1. ಚಿಕ್ಕ ಹೆಸರು ಮತ್ತು ಪ್ರಾರಂಭ

2. ಅರ್ಥ ವಿವರಣೆ

3. ಅಸ್ತಿತ್ವದಲ್ಲಿರುವ ಕಾನೂನುಗಳಲ್ಲಿ ಕೆಲವು ಮೌಲ್ಯಗಳಿಗೆ ಮಾಡಿದ ಉಲ್ಲೇಖಗಳ ಅರ್ಥಾನ್ವಯ

* * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**1957ರ ಅಧಿನಿಯಮ 12.–** ಭಾರತ ನಾಣ್ಯ ತಯಾರಿಕೆ ಅಧಿನಿಯಮ, 1906ರ ಅಡಿಯಲ್ಲಿ 1957ರ ಏಪ್ರಿಲ್ 1 ರಿಂದ ಜಾರಿಗೆ ಬರುವಂತೆ ಹೊಸ ನಾಣ್ಯಗಳನ್ನು (ನಯೆ ಪೈಸೆ) ಚಲಾವಣೆಗೆ ತರುವ ದೃಷ್ಟಿಯಿಂದ, ಅಸ್ತಿತ್ವದಲ್ಲಿರುವ ಕಾನೂನುಗಳಲ್ಲಿ ನಯೆ ಪೈಸೆಗೆ ಸಂಬಂಧಿಸಿದಂತೆ ಆಣೆಗಳಿಗೆ, ಪೈಸೆಗೆ ಮತ್ತು ಪೈಗಳಿಗೆ ಮಾಡಿದ ಉಲ್ಲೇಖಗಳಿಗೆ ಅರ್ಥಾನ್ವಯ ಮಾಡಲು ಉಪಬಂಧ ಕಲ್ಪಿಸುವುದು ಅಗತ್ಯವಾಗಿದೆ.

ಆದ್ದರಿಂದ ಈ ವಿಧೇಯಕ.

(ಅಧಿಸೂಚನೆ ಸಂಖ್ಯೆ: 20728 ಎಲ್.ಎ. ದಿನಾಂಕ: 18ನೇ ಮಾರ್ಚ್ 1957 ನೋಡಿ. ಕಡತ ಸಂಖ್ಯೆ ಎಲ್.ಎ.ಡಬ್ಲ್ಯು 47 ಎಲ್.ಜಿ.ಎನ್. 57)

**1957ರ [1][ಕರ್ನಾಟಕ][1] ಅಧಿನಿಯಮ ಸಂಖ್ಯೆ 12**

1957ರ ಏಪ್ರಿಲ್ ಒಂದನೇ ದಿನದಂದು [1][ಕರ್ನಾಟಕ ರಾಜ್ಯಪತ್ರ][1] ದಲ್ಲಿ ಮೊದಲು ಪ್ರಕಟಗೊಂಡಿದೆ.

# [1][ಕರ್ನಾಟಕ][1] ಅಸ್ತಿತ್ವದಲ್ಲಿರುವ ಕಾನೂನುಗಳ (ಮೌಲ್ಯಗಳಿಗೆ ಮಾಡಿದ ಉಲ್ಲೇಖಗಳ ಅರ್ಥಾನ್ವಯ) ಅಧಿನಿಯಮ, 1957

(1957ರ ಮಾರ್ಚ್ ಮೂವತ್ತೊಂದನೇ ದಿನದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ.)

ಹೊಸ ನಾಣ್ಯಗಳಿಗೆ (ನಯೆಪೈಸೆ) ಸಂಬಂಧಿಸಿದಂತೆ ಆಣೆಗಳು, ಪೈಸೆಗಳು ಮತ್ತು ಪೈಗಳಲ್ಲಿ ವ್ಯಕ್ತಪಡಿಸಿದ ಮೌಲ್ಯಗಳಿಗೆ ಅಸ್ತಿತ್ವದಲ್ಲಿರುವ ಕಾನೂನುಗಳಲ್ಲಿ ಮಾಡಿದ ಉಲ್ಲೇಖಗಳ ಅರ್ಥಾನ್ವಯಕ್ಕಾಗಿ ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.

ಹೊಸ ನಾಣ್ಯಗಳಿಗೆ (ನಯೆಪೈಸೆ) ಸಂಬಂಧಿಸಿದಂತೆ ಆಣೆಗಳು, ಪೈಸೆ ಮತ್ತು ಪೈಗಳಲ್ಲಿ ವ್ಯಕ್ತಪಡಿಸಿದ ಮೌಲ್ಯಗಳಿಗೆ ಅಸ್ತಿತ್ವದಲ್ಲಿರುವ ಕಾನೂನುಗಳಲ್ಲಿ ಮಾಡಿದ ಉಲ್ಲೇಖಗಳ ಅರ್ಥಾನ್ವಯಕ್ಕಾಗಿ ಉಪಬಂಧ ಕಲ್ಪಿಸುವುದು ವಿಹಿತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಂಟನೇ ವರ್ಷದಲ್ಲಿ [1][ಕರ್ನಾಟಕ ರಾಜ್ಯ][1] ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**1. ಚಿಕ್ಕ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು, [1][ಕರ್ನಾಟಕ][1] ಅಸ್ತಿತ್ವದಲ್ಲಿರುವ ಕಾನೂನುಗಳ (ಮೌಲ್ಯಗಳಿಗೆ ಮಾಡಿದ ಉಲ್ಲೇಖಗಳ ಅರ್ಥಾನ್ವಯ) ಅಧಿನಿಯಮ, 1957 ಎಂದು ಕರೆಯತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ಇದು, 1957ರ ಏಪ್ರಿಲ್ ಒಂದನೇ ದಿನದಿಂದ ಜಾರಿಗೆ ಬರತಕ್ಕದ್ದು.

**2. ಅರ್ಥ ವಿವರಣೆ.-** ಈ ಅಧಿನಿಯಮದಲ್ಲಿ "ಅಸ್ತಿತ್ವದಲ್ಲಿರುವ ಕಾನೂನು" ಎಂದರೆ ಯಾವ ವಿಷಯಕ್ಕೆ ಸಂಬಂಧಿಸಿದಂತೆ [1][ಕರ್ನಾಟಕ ರಾಜ್ಯ][1] ವಿಧಾನ ಮಂಡಲವು ಕಾನೂನುಗಳನ್ನು ಮಾಡಲು ಅಧಿಕಾರವನ್ನು ಹೊಂದಿದೆಯೋ ಆ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಇಡೀ ಕರ್ನಾಟಕ ರಾಜ್ಯದಲ್ಲಿನ ಅಥವಾ ಅದರ ಯಾವುದೇ ಭಾಗದಲ್ಲಿನ ಯಾವುದೇ ಅಧಿನಿಯಮ, ಅಧ್ಯಾದೇಶ ಅಥವಾ ಕಾನೂನಿನ ಬಲವನ್ನು ಹೊಂದಿರುವ ಯಾವುದೇ ವಿನಿಯಮ ಅಥವಾ ಭಾರತ ನಾಣ್ಯ ಪದ್ಧತಿ ಅಧಿನಿಯಮ, 1906ರ (1906ರ ಕೇಂದ್ರ ಅಧಿನಿಯಮ III) 14ನೇ ಪ್ರಕರಣದ (3)ನೇ ಉಪಪ್ರಕರಣದ ಉಪಬಂಧಗಳು ಅನ್ವಯವಾಗಬಹುದಾದಂಥ ಯಾವುದೇ ಅಧಿನಿಯಮಿತಿ, ಅಧಿಸೂಚನೆ, ನಿಯಮ ಅಥವಾ ಆದೇಶವನ್ನು ಹೊರತುಪಡಿಸಿ, ಅದರ ಅಡಿಯಲ್ಲಿ ಹೊರಡಿಸಿದ ಅಥವಾ ರಚಿಸಿದ ಯಾವುದೇ ಅಧಿಸೂಚನೆ, ನಿಯಮ, ಆದೇಶ, ಉಪವಿಧಿ, ಯೋಜನೆ ಅಥವಾ ಇತರ ಲಿಖಿತ.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**3. ಅಸ್ತಿತ್ವದಲ್ಲಿರುವ ಕಾನೂನುಗಳಲ್ಲಿನ ಕೆಲವು ಮೌಲ್ಯಗಳಿಗೆ ಮಾಡಿದ ಉಲ್ಲೇಖಗಳ ಅರ್ಥಾನ್ವಯ:-** ಅಸ್ತಿತ್ವದಲ್ಲಿರುವ ಪ್ರತಿಯೊಂದು ಕಾನೂನಿನಲ್ಲಿ ಆಣೆಗಳು, ಪೈಸೆ ಮತ್ತು ಪೈಗಳಲ್ಲಿ ವ್ಯಕ್ತಪಡಿಸಿದ ಯಾವುದೇ ಮೌಲ್ಯಕ್ಕೆ ಮಾಡಿದ ಎಲ್ಲ ಉಲ್ಲೇಖಗಳನ್ನು, ಭಾರತ ನಾಣ್ಯ ತಯಾರಿಕೆ ಅಧಿನಿಯಮ, 1906ರ (1906ರ ಕೇಂದ್ರ ಅಧಿನಿಯಮ III) 14ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ಪರಿವರ್ತಿಸಿ, ಸದರಿ ಅಧಿನಿಯಮದ 14ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಹೊಸ ನಾಣ್ಯಗಳಲ್ಲಿ ವ್ಯಕ್ತಪಡಿಸಿದ ಮೌಲ್ಯಕ್ಕೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು.

* * *

The above translation of the Karnataka Existing Laws (Construction of Reference to Values) Act, 1957 (Act No. 12 of 1957) shall be authoritative text in the Kannada Language under section 5A of the Karnataka Official Language Act, 1963 (Karnataka Act 26 of 1963).

**GOVERNOR OF KARNATAKA**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

ಪಿ.ಆರ್ 1191

**ಜಿ.ಕೆ. ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.